# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್.ರಸ್ತೆ, ತುಮಕೂರು - 572 103

ಸಂಖ್ಯೆ:ತುವಿ:ಶೈವಿ:2022-23: 2513 ದಿನಾಂಕ:19.07.2022

## ಸುತ್ತೋಲೆ

ವಿಷಯ : ಆಂತರಿಕ ಅಂಕಗಳನ್ನು ಸಮರ್ಪಕವಾಗಿ ನೀಡುವ ಕುರಿತು.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 18.07.2022

*****

NEP ಯ ಪ್ರೋಗ್ರಾಂ ವಿನ್ಯಾಸ (Programme Structure) ದನ್ವಯ ಚಟುವಟಿಕೆ ಆಧಾರಿತ Value Based Skill Enhancement Course ಗಳನ್ನು ದ್ವಿತೀಯ ಸೆಮಿಸ್ಟರ್‌ನ ಎಲ್ಲಾ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ನೀಡಬೇಕು. ಈ ಕೋರ್ಸುಗಳನ್ನು ವಿಶ್ವವಿದ್ಯಾನಿಲಯದ ವಿನಿಯಮ 10.xiii ದಲ್ಲಿ ಉಲ್ಲೇಖಿಸಿರುವಂತೆ ಈ ಕೆಳಗಿನ ಪಟ್ಟಿಯಿಂದ ಯಾವುದಾದರೂ 02 ಕೋರ್ಸುಗಳನ್ನು ವಿದ್ಯಾರ್ಥಿಗಳ ಆಯ್ಕೆಯ ಮೇರೆಗೆ ನೀಡುವುದು. ಈ ಎರಡೂ ಕೋರ್ಸುಗಳು ತಲಾ 1 ಕ್ರೆಡಿಟ್‌ನದಾಗಿದ್ದು, ಇವುಗಳಿಗೆ SEE (Semester End Examination) ಇರುವುದಿಲ್ಲ. ತಲಾ 25 ಆಂತರಿಕ ಅಂಕಗಳನ್ನು (Internal Assessment) ನೀಡಬೇಕಾಗಿರುತ್ತದೆ.

| | Courses | Deparments |
|---|---|---|
| a) | Physical Education or Activities related to Yoga/ Sports and Games | Physical Education |
| b) | N.C.C | N.C.C |
| c) | N.S.S. / Ranger and Rovers/Redcross | Department of Cultural Activities |
| d) | Field studies /Industry Implant Training | |
| e) | Involvement in campus publication or other publications | |
| f) | Publication of articles in newspapers, magazines | |
| g) | Community work such as promotion of values of National Integration, Environment, Human rights and duties, Peace, Civic sense etc | |
| h) | A Small project work concerning the achievements of India in different fields | |
| i) | Evolution of study groups/seminar circles on Indian thoughts andideas | |
| j) | Activity exploring different aspects of Indian civilizations | |
| k) | Involvement in popularization programmes such as scientific temper | |
| l) | Innovative compositions and creations in dance/music/theatre and visual arts, | |
| m) | Any other activities such as Cultural Activities | |

ದೈಹಿಕ ಶಿಕ್ಷಣದ ಚಟುವಟಿಕೆ ಆಧಾರಿತ ಕೌಶಲ್ಯಾಭಿವೃದ್ಧಿ ಪತ್ರಿಕೆಯನ್ನು ದೈಹಿಕ ಶಿಕ್ಷಣ ವಿಭಾಗಕ್ಕೆ ಹಾಗೂ NCC ಚಟುವಟಿಕೆ ಆಧಾರಿತ ಕೌಶಲ್ಯಾಭಿವೃದ್ಧಿ ಪತ್ರಿಕೆಯನ್ನು NCC ವಿಭಾಗಕ್ಕೆ MAP ಮಾಡಲಾಗಿದೆ. ಉಳಿದ ಚಟುವಟಿಕೆ ಆಧಾರಿತ ಕೌಶಲ್ಯಾಭಿವೃದ್ಧಿ ಪತ್ರಿಕೆಗಳನ್ನು UUCMS Academic Module ನಲ್ಲಿ Deparment of Cultural Activities ಎಂದು ನಮೂದಿಸಲಾಗಿದೆ, ಎರಡನೇ ಸೆಮಿಸ್ಟರ್ ವಿದ್ಯಾರ್ಥಿಗಳ Course Registration ಸಂದರ್ಭದಲ್ಲಿ ಆಯಾ ವಿಭಾಗದಿಂದ ಆರಿಸಿ ಮೇಲೆ ನಮೂದಿಸಿರುವ ಪಟ್ಟಿಯಲ್ಲಿ ಎರಡು ಕೋರ್ಸುಗಳನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ. ಕಾಲೇಜುಗಳಲ್ಲಿ ಈ ವಿಭಾಗಗಳನ್ನು MAP ಮಾಡಿ ಆಯಾ ವಿಭಾಗದಿಂದಲೇ ಹಾಜರಾತಿ ಹಾಗೂ ಆಂತರಿಕ ಅಂಕಗಳನ್ನು ವಿದ್ಯಾರ್ಥಿಗಳಿಗೆ ನೀಡುವುದು.

(ಪು.ತಿ.ನೋ)

ಈ ಕೋರ್ಸುಗಳನ್ನು ಮೌಲ್ಯಯುತವಾಗಿ ವಿದ್ಯಾರ್ಥಿಗಳಿಗೆ ನೀಡುವುದು ಕಾಲೇಜಿನ ಆದ್ಯ ಕರ್ತವ್ಯವಾಗಿದ್ದು, ಎಲ್ಲಾ ವಿದ್ಯಾರ್ಥಿಗಳಿಗೆ ಈ ಕೋರ್ಸುಗಳನ್ನು ನೀಡಿರುವ ಕುರಿತು ಸಂಪೂರ್ಣ ಮಾಹಿತಿ ಹಾಗೂ ಈ ಕೋರ್ಸುಗಳ ಬೋಧನಾ ಯೋಜನೆಯನ್ನು ಸಿದ್ಧಪಡಿಸಿ ದಾಖಲೆಗಳನ್ನು ಕಡ್ಡಾಯವಾಗಿ ಕಾಲೇಜು ಹಂತದಲ್ಲಿ ಹೊಂದುವುದು, ಸದರಿ ದಾಖಲೆಗಳನ್ನು ವಿಶ್ವವಿದ್ಯಾನಿಲಯದ ಸಮಿತಿಯು ಕಾಲೇಜಿಗೆ ಭೇಟಿ ನೀಡಿದ ಯಾವುದೇ ಸಂದರ್ಭದಲ್ಲಿ ಹಾಜರುಪಡಿಸುವುದು.

ಮುಂದುವರೆದು, ಮುಖ್ಯ ವಿಷಯ (Core Subject), ಮುಕ್ತ ಆಯ್ಕೆ (Open Elective) ಹಾಗೂ ಭಾಷಾ ಪತ್ರಿಕೆ (Languages), (3 ರಿಂದ 4 Credits) ಗಳಿಗೆ 40 ಆಂತರಿಕ ಅಂಕಗಳನ್ನು ನೀಡಬೇಕಾಗಿರುತ್ತದೆ. ವಿಶ್ವವಿದ್ಯಾನಿಲಯದ ವಿನಿಯಮದ ಪ್ರಕಾರ ಆಂತರಿಕ ಅಂಕಗಳ ವಿಭಜನೆಯನ್ನು ಕೆಳಕಂಡ ಕೋಷ್ಟಕದಲ್ಲಿರುವಂತೆ ಯೋಜಿಸಲು ತಿಳಿಸಿದೆ.

| Activities | C1 | C2 | Total Marks |
|---|---|---|---|
| Session Test | 10% | 10% | 20% |
| Seminar/Presnetations/Activity | 10% | - | 10% |
| Case Study / Assignment / Field Work / Project Work etc., | - | 10% | 10% |
| **Total** | 20% | 20% | 40% |

ಈ ರೀತಿಯಾಗಿ ಆಂತರಿಕ ಅಂಕಗಳನ್ನು (Internal Assessment) ನಿಗದಿಪಡಿಸಿರುವ ಕುರಿತು ದಾಖಲೆಗಳನ್ನು ಸಮಿತಿ ಭೇಟಿ ನೀಡುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು. ಮುಂದುವರೆದು, 2022-23ನೇ ಸಾಲಿನಿಂದ ಈ IA Components ಗಳನ್ನು UUCMS ನಲ್ಲಿಯೇ C1, C2, C3, C4 ಎಂಬುದಾಗಿ ವಿಶ್ವವಿದ್ಯಾನಿಲಯದ ಹಂತದಲ್ಲಿಯೇ Settings ಮಾಡಲಾಗುವುದು ಹಾಗೂ ಅದೇ ರೀತಿಯಾಗಿ ಕಾಲೇಜು ಹಂತದಲ್ಲಿ ಕ್ರಮ ವಹಿಸುವುದು.

Skill Enhancement Course ಗಳ ಬೋಧನೆಗೆ ತೆಗೆದುಕೊಂಡ ಕ್ರಮಗಳ ಕುರಿತು ಬೋಧನಾ ಯೋಜನೆ ಸಿದ್ಧಪಡಿಸಿ ವರದಿ ಸಲ್ಲಿಸುವುದು ಹಾಗೂ ಸೂಕ್ತ ದಾಖಲೆಗಳನ್ನು ಸಮಿತಿಯು ಭೇಟಿ ನೀಡಿದ ಸಂದರ್ಭದಲ್ಲಿ ಹಾಜರುಪಡಿಸುವುದು.

ಆದೇಶದ ಮೇರೆಗೆ,

Mangalahouri M

ಉಪಕುಲಸಚಿವರು
ಶೈಕ್ಷಣಿಕ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಘಟಕ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು

**ಪ್ರತಿಗಳು:**

1. ಮಾನ್ಯ ಕುಲಸಚಿವರು(ಮೌ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಸಿಸ್ಟಂ ಅನಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು – ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು, e-mail ಮೂಲಕ ಕಳುಹಿಸುವುದು.
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಚೇರಿ ಪ್ರತಿ.